## ಸ್ವಾಮಿ ವಿವೇಕಾನಂದರ ಶಿಷ್ಯ

# ಶರತ್‌ಚಂದ್ರ ಚಕ್ರವರ್ತಿ

ಇಂಗ್ಲಿಷ್ ಮೂಲ : **ಛಾಯಾ ಬ್ಯಾನರ್ಜಿ** ಸಂಗ್ರಹಾನುವಾದ: **ಸ್ವರ್ಣಗೌರಿ**

**ಭಾಗ ೩**

ಶ್ರೀಮಾತೆಯವರು ಶರತ್‌ನನ್ನು ಭೇಟಿಯಾದಾಗಲೆಲ್ಲಾ ಅವನು ಸುಮಧುರ ಕಂಠದಿಂದ ಹಾಡುವುದನ್ನು ಕೇಳಲು ಇಚ್ಛಿಸುತ್ತಿದ್ದರು. ಒಮ್ಮೆ ಭಕ್ತನೊಬ್ಬನೊಡನೆ, ''ನಿನ್ನೆ ನೀನು ಬಲರಾಮನ ಮನೆಗೆ ಬರಲಿಲ್ಲ, ಶರತ್‌ಚಂದ್ರನು ಕೆಲವು ಹಾಡುಗಳನ್ನು ಹಾಡಿದ. ಅಹಾ! ಏನು ಭಕ್ತಿ! ಎಂತಹ ಮಾಧುರ್ಯ!'' ಎಂದು ಉದ್ಗರಿಸಿದರು. ಸಮಯ ದೊರೆತಾಗಲೆಲ್ಲಾ ಬೇಲೂರು ಮಠಕ್ಕೆ ಭೇಟಿ ನೀಡುತ್ತಿದ್ದು, ಆರಾತ್ರಿಕದ ನಂತರ ತಾನೇ ರಚಿಸಿದ ಹಾಡುಗಳನ್ನು ಹಾಡುತ್ತಾ ಆನಂದದಿಂದ ನೃತ್ಯ ಮಾಡುತ್ತಿದ್ದನು. ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ಬ್ರಹ್ಮಾನಂದ, ಪ್ರೇಮಾನಂದ, ಶಿವಾನಂದರು ಮತ್ತು ಗಿರೀಶ್‌ಚಂದ್ರ ಘೋಷ್ ನೃತ್ಯದಲ್ಲಿ ಪಾಲ್ಗೊಳ್ಳುತ್ತಿದ್ದರು.

ಒಮ್ಮೆ ಪೂರ್ಣಿಯಾ ಎಂಬ ಸ್ಥಳದಲ್ಲಿ ಕೆಲಸ ಮಾಡುತ್ತಿದ್ದಾಗ ತನ್ನ ಗುರುವಿನ ಅಪಾರ ಕರುಣೆ ಹಾಗೂ ಅಹೇತುಕ ಕೃಪೆಯ ಅನುಭವವಾಯಿತು. ಅದೊಂದು ಗುರುವಿನ ಜಯಂತ್ಯುತ್ಸವದ ಶುಭದಿನ. ಶರತ್‌ಚಂದ್ರನು ಕೆಲಸಕ್ಕೂ ಹೋಗಲಿಲ್ಲ , ರಜೆಯ ಚೀಟಿಯನ್ನೂ ಕಳುಹಿಸಿರಲಿಲ್ಲ. ಆ ದಿನವೇ ಇದ್ದಕ್ಕಿದ್ದಂತೆ ಬ್ರಿಟಿಷ್ ಅಧಿಕಾರಿಯೊಬ್ಬರು ತನಿಖೆಗೆಂದು ಕಛೇರಿಗೆ ಭೇಟಿಯಿತ್ತರು. ಮಾರನೆಯ ದಿನ ಸುದ್ದಿ ತಿಳಿದು ಕಳವಳದಿಂದ ಕಛೇರಿಗೆ ಧಾವಿಸಿದವನಿಗೆ ಮಹದಾಶ್ಚರ್ಯವೇ ಕಾದಿತ್ತು! ಕಛೇರಿಯಲ್ಲಿನ ತನ್ನ ಕೆಲಸಕ್ಕೆ ಶ್ಲಾಘನೆಯ ಪತ್ರ ಕಾಯುತ್ತಿತ್ತು. ಮೊದಲೇ ಬ್ರಿಟಿಷರ ಕುದೃಷ್ಟಿಯಲ್ಲಿದ್ದವನಿಗೆ ಈಗ ಕರ್ತವ್ಯಲೋಪವೆಂಬ ಘೋರ ಅಪರಾಧಕ್ಕೆ ಗುರಿಯಾಗಿ ಶಿಕ್ಷಿತನಾಗುವ ಬದಲು ಮೆಚ್ಚುಗೆಯ ಪತ್ರ! ತನ್ನ ಕಣ್ಣನ್ನೇ ನಂಬಲಾರದಾದ. ಗುರುವಿನ ಕೃಪೆಯನ್ನರಿತ ಶರತ್‌ನ ಮನ ಹಾಗೂ ನಯನಗಳೆರಡೂ ತುಂಬಿ ಬಂದವು.

ಬ್ರಾಹ್ಮಣ ಸಂಪ್ರದಾಯಸ್ಥರ ಕುಟುಂಬದಲ್ಲಿ ಜನಿಸಿದ ಶರತ್ ತುಂಬಾ ಆಚಾರಶೀಲನಾಗಿದ್ದನು. ಆದರೆ ಸ್ವಾಮೀಜಿಯವರ ಒಡನಾಟದಲ್ಲಿ ತನ್ನ ಆಚಾರ, ಸಂಪ್ರದಾಯಗಳನ್ನು ಮೀರಿ ಬೆಳೆದು ನಿಂತನು. ಅಷ್ಟೇ ಅಲ್ಲದೆ ಪಾಶ್ಚಾತ್ಯ ಸಂಸ್ಕೃತಿಯಲ್ಲಿನ ಒಳ್ಳೆಯ ವಿಚಾರಗಳಿಗೆ ಮನಸೋತು ಅವರಂತೆಯೇ ಉಡುಪನ್ನು ಧರಿಸುತ್ತಿದ್ದನು. ಆದರೆ ಪುರುಲಿಯಾದಲ್ಲಿದ್ದಾಗ ಉಡುಪಿನಲ್ಲಿ ಸ್ವಾಮೀಜಿಯವರನ್ನು ಅನುಕರಿಸುತ್ತಾ ಅವರ ಚಿಂತನೆಯಲ್ಲಿಯೇ ಸದಾ ಮಗ್ನನಾಗಿರುತ್ತಿದ್ದನು. ಆ ಸಮಯದಲ್ಲಿ ಸಂಸ್ಕೃತದ ಶ್ಲೋಕಗಳು ಸ್ಫುರಿಸುತ್ತಿದ್ದವು. ಪರಿಣಾಮವಾಗಿ 'ಶ್ರೀರಾಮಕೃಷ್ಣ ಪಾಂಚಾಲಿ' ಪ್ರಕಟವಾಯಿತು. ಶ್ರೀಮಾತೆಯವರು ಹೇಳಿಕೊಟ್ಟ ಶ್ರೀರಾಮಕೃಷ್ಣರ ಪೂಜೆಯ ವಿವರಣೆಯು ಇದರಲ್ಲಿದೆ.

ಶರತ್ ಅನೇಕ ಧಾರ್ಮಿಕ ಸಭೆಗಳಲ್ಲಿ ಅಧ್ಯಕ್ಷ ಸ್ಥಾನ ವಹಿಸುತ್ತಾ ಉಪನ್ಯಾಸಗಳನ್ನು ನೀಡುತ್ತಾ ಜನರನ್ನು ಆಕರ್ಷಿಸುತ್ತಿದ್ದನು. ಆತನ ವಿಚಾರಧಾರೆಯು ಅತ್ಯಂತ ವಿಶಾಲವಾಗಿದ್ದು, ಅದ್ಭುತವಾದ ಹಾಸ್ಯರಸದಿಂದ ಕೂಡಿತ್ತು. ಪ್ರತಿದಿನವೂ ಮೊಮ್ಮಕ್ಕಳೊಡನೆ ಕುಳಿತು ಆಹಾರ ಸೇವಿಸುವಾಗ ವಿಕಟ ಪದ್ಯಗಳನ್ನು ಹೇಳಿ ಮಕ್ಕಳನ್ನು ನಗಿಸುತ್ತಿದ್ದನು. ಮಿತಾಹಾರಿಯಾದರೂ ರುಚಿಕರವಾದ ಭಕ್ಷ್ಯಗಳನ್ನು ಹಾಗೂ ವೈವಿಧ್ಯತೆಯನ್ನು ಇಷ್ಟಪಡುತ್ತಿದ್ದನು. ಅತಿಥಿಗಳನ್ನೂ ಹಾಗೆಯೇ ಪ್ರೀತಿಯಿಂದ ಸೇವಿಸುತ್ತಿದ್ದದ್ದು ಆತನ ವೈಶಿಷ್ಟ್ಯ.

**ಕುಟುಂಬದ ಯಜಮಾನ:** ಕುಟುಂಬದ ಜವಾಬ್ದಾರಿಯುತ ಯಜಮಾನನಾಗಿ ಶರತ್‌ಚಂದ್ರನಿಗೆ ಎಲ್ಲಾ ಆಗುಹೋಗುಗಳ ಬಗ್ಗೆಯೂ ಸದಾ ಗಮನವಿರುತ್ತಿತ್ತು. ಕುಟುಂಬದ ಎಲ್ಲಾ ವಿದ್ಯಮಾನಗಳಿಗೂ ತಾನೇ ಹೊಣೆಗಾರಿಕೆಯನ್ನು ಹೊರುತ್ತಿದ್ದನು. ಆಧ್ಯಾತ್ಮಿಕ ಪ್ರವೃತ್ತಿಯುಳ್ಳ, ಸಂಪ್ರದಾಯಸ್ಥ ಕುಟುಂಬದಲ್ಲಿ ಜನಿಸಿದ ಪತ್ನಿ ಮೋಕ್ಷದಾಯಿನಿ ಸರಳ ಸ್ವಭಾವದವಳಾಗಿದ್ದಳು. ಹೆಚ್ಚು ವಿದ್ಯಾವಂತಳಲ್ಲದಿದ್ದರೂ ಆದರ್ಶ ಗೃಹಿಣಿಯಾದ ಆಕೆ ಶ್ರೀಮಾತೆಯವರ ದೀಕ್ಷಿತ ಶಿಷ್ಯೆ. ಅನೇಕ ಬಾರಿ ಶ್ರೀರಾಮಕೃಷ್ಣರ ನೇರ ಶಿಷ್ಯರ ಹಾಗೂ ನಾಗಮಹಾಶಯರ ಸೇವೆ ಮಾಡುವ ಸುಯೋಗ ಪಡೆದ ಸೌಭಾಗ್ಯಶೀಲೆ. ಮನೆಯಲ್ಲಿ ಸಾಧುಸೇವೆ, ಸತ್ಸಂಗಗಳು ನಿರಂತರ ನಡೆಯುತ್ತಿದ್ದವು. ಆಕೆಯ ಕಾಪಟ್ಯರಹಿತ, ನಿರಾಡಂಬರ ವ್ಯಕ್ತಿತ್ವ ಎಲ್ಲರನ್ನೂ ಮೌನವಾಗಿ ಆಕರ್ಷಿಸುತ್ತಿತ್ತು. ಸದಾ ಪತಿಗೆ ವಿಧೇಯಳಾಗಿದ್ದಳು. ಶರತ್‌ಚಂದ್ರನು ಆಕೆಯನ್ನು ಬಹಳ ಆತ್ಮೀಯತೆಯಿಂದ ಕಾಣುತ್ತಿದ್ದನು. ಮಕ್ಕಳ ವಿದ್ಯಾಭ್ಯಾಸವನ್ನು ಪೋಷಿಸುತ್ತಾ ಅಕ್ಕರೆಯಿಂದ ಪ್ರೋತ್ಸಾಹಿಸುತ್ತಿದ್ದನು. ಈ ಆದರ್ಶ ಗೃಹಸ್ಥನಲ್ಲಿ ಅನಾಸಕ್ತಿ ಗೋಪ್ಯವಾಗಿತ್ತು. ಪುತ್ರಿಯರ ವಿವಾಹದ ನಂತರ ಅವರನ್ನು ಕಾಣುವ ಕಾತರತೆ ಹಾಗೂ ಬಯಕೆಯನ್ನು ವ್ಯಕ್ತಪಡಿಸುತ್ತಾ ಪತ್ರ ಬರೆಯುತ್ತಿದ್ದನು. ಆದರೆ ಅವರುಗಳು ತವರುಮನೆಗೆ ಬಂದಾಗ ಅಂತಹ ಆಸಕ್ತಿ ಏನೂ ತೋರುತ್ತಿರಲಿಲ್ಲ. ಅದೇ ದಿವ್ಯತ್ರಯರನ್ನು ಕುರಿತು ಮಾತನಾಡುವಾಗ

ಕಣ್ಣೀರು ಧಾರಾಕಾರವಾಗಿ ಹರಿಯುತ್ತಿತ್ತು. ''ಕೆಸರಿನ ಮೀನಿನಂತಿರು'' ಎಂಬ ಗುರುವಿನ ಆಣತಿಯೇ ಆಧ್ಯಾತ್ಮಿಕ ಜೀವನದ ದಾರಿದೀಪವಾಯಿತು. ಯಾರು ಶ್ರೀರಾಮಕೃಷ್ಣರ ಹಾಗೂ ಸ್ವಾಮೀಜಿಯವರ ಪದತಲದಲ್ಲಿ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಳ್ಳುತ್ತಾನೆಯೋ, ಆತ ಇನ್ನಾರ ದಾಸನಾಗಲೂ ಇಚ್ಛಿಸನು. ಉನ್ನತ ಬ್ರಿಟಿಷ್ ಅಧಿಕಾರಿಗಳನ್ನು ಪ್ರಸನ್ನಗೊಳಿಸದ ಕಾರಣ ಬಡ್ತಿ ದೊರೆಯದಿದ್ದರೂ ಆತನಿಗೆ ಕಿಂಚಿತ್ತೂ ಬೇಸರವಿರಲಿಲ್ಲ.

**ನಿವೃತ್ತಿಯ ಜೀವನ:** ಕ್ರಿ.ಶ. ೧೯೩೩ರಲ್ಲಿ ವೃತ್ತಿ ಜೀವನದಿಂದ ನಿವೃತ್ತನಾದ ಮೇಲೆ ಸುಮಾರು ಐದು ವರ್ಷಗಳ ಕಾಲ ಪಿಂಚಣಿ ಹಣದಿಂದ ಕಲ್ಕತ್ತೆಯ ತನ್ನ ಮನೆಯಲ್ಲಿ ಏಕಾಂತವಾಗಿ ಇದ್ದನು. ಆಗಾಗ್ಗೆ ಊರಿಗೆ ಭೇಟಿ ನೀಡಿ ಕುಟುಂಬದ ಸದಸ್ಯರೊಡನೆ ಆನಂದದಿಂದ ಕಾಲಕಳೆಯುತ್ತಿದ್ದನು. ಧೂಮಪಾನ ತ್ಯಜಿಸಿದ್ದರೂ ಅನಾರೋಗ್ಯದಿಂದ ಸ್ವಲ್ಪ ಕಾಲ ನರಳಬೇಕಾಯಿತು. ಈ ಮಧ್ಯೆ ದೃಷ್ಟಿಯೂ ಕ್ಷೀಣಿಸಿತು. ಶ್ರೀರಾಮಕೃಷ್ಣರ ನೇರ ಶಿಷ್ಯರ ಸಂಪರ್ಕದ ಬಯಕೆಯಿಂದ ತನ್ನ ಕೊನೆಗಾಲವನ್ನು ಕಲ್ಕತ್ತೆಯ ಮನೆಯಲ್ಲೇ ಕಳೆಯಲಿಚ್ಛಿಸಿದನು. ಕ್ರಮೇಣ ಅಂತರ್ಮುಖನಾಗಿ ಹೆಚ್ಚಿನ ಸಮಯವನ್ನು ಜಪಧ್ಯಾನಾದಿಗಳಲ್ಲಿ ಕಳೆಯತೊಡಗಿದನು. ಗುರುವಿನಾಜ್ಞೆಯನ್ನು ಪೂರ್ಣಗೊಳಿಸಲು ಈ ಬಿಡುವಿನ ಜೀವನವನ್ನು ಉಪಯೋಗಿಸಿಕೊಂಡು 'ವಿವೇಕಭಾಷ್ಯ'ವನ್ನು ಬರೆದನು. ಬ್ರಹ್ಮಸೂತ್ರಗಳ ಮೇಲೆ ಭಾಷ್ಯ ಬರೆಯಲು ಹಿಂದೆಯೇ ಸ್ವಾಮೀಜಿ ಆಜ್ಞಾಪಿಸಿದ್ದರು. ಸ್ವಾಮೀಜಿಯವರ ಶಿಷ್ಯರಾದ ಸ್ವಾಮಿ ಶುದ್ಧಾನಂದರು ಹಸ್ತಪ್ರತಿಯನ್ನು ಪರಿಷ್ಕರಿಸಿದರು. ಏಳು ಅಧ್ಯಾಯಗಳುಳ್ಳ ಈ ಹಸ್ತಪ್ರತಿಯು ಒಂದು ಸಾವಿರಕ್ಕೂ ಹೆಚ್ಚು ಪುಟಗಳಿಂದ ಕೂಡಿತ್ತು. ಶರತ್‌ಚಂದ್ರನ ಇಹಲೋಕ ವ್ಯಾಪಾರ ಮುಗಿದ ನಂತರ ಕುರುಷಿ ಎಂಬ ಆತನ ಊರಿನಲ್ಲಿ ಈ ಗೆದ್ದಲು ಹಿಡಿದಿದ್ದ ಹಸ್ತಪ್ರತಿ ದೊರಕಿತು. ನಂತರ 'ಉದ್ಬೋಧನ' ಕಛೇರಿಗೆ ಕಳುಹಿಸಲಾಗಿ, ಸ್ವಲ್ಪ ಭಾಗ ಪ್ರಕಟವಾಯಿತು. ಈಗ ಇದರ ಪೂರ್ಣ ಹಸ್ತಪ್ರತಿ ಆತನ ಮಕ್ಕಳ ಬಳಿಯಿದೆ.

ಸ್ವಾಮಿ ಶಾರದಾನಂದರು ಇಚ್ಛಿಸಿದರೆಂದು ಶ್ರೀರಾಮಕೃಷ್ಣ ಶತನಾಮವನ್ನು ರಚಿಸಿ ತನ್ನ ಮೊಮ್ಮಗ ರಘುವೀರನ ಸ್ಮರಣಾರ್ಥವಾಗಿ ಪ್ರಕಟಿಸಿ, ಕಾಶಿಯ ಸೇವಾಶ್ರಮದಲ್ಲಿ ಮುಕ್ತವಾಗಿ ಹಂಚಿದನು. ತನ್ನ ವೃದ್ಧತಾಯಿಯ ಬಯಕೆಯಿಂದಾಗಿ ಮನೆಯವರನ್ನೆಲ್ಲ ಕಾಶಿಗೆ ಕರೆದೊಯ್ಯುತ್ತಿದ್ದನು ಆಗಾಗ್ಗೆ. ಈ ಕಾರಣದಿಂದ ಸೇವಾಶ್ರಮದೊಡನೆ ನಿಕಟ ಬಾಂಧವ್ಯ ಬೆಸದಿತ್ತು.

ಸ್ವಾಮಿ ವಿವೇಕಾನಂದರು ಬಿಳಿಯ ಅಮೃತಶಿಲೆಯ ಮೇಲೆ ಬಿಡಿಸಿದ್ದ ಶ್ರೀರಾಮಕೃಷ್ಣರ ಐದು ಭಾವಚಿತ್ರಗಳನ್ನು ಪಾಶ್ಚಾತ್ಯ ದೇಶದಿಂದ ತಂದಿದ್ದರು. ಅವುಗಳಲ್ಲಿ ಒಂದನ್ನು ತಮ್ಮ ಪ್ರೀತಿಯ ಬಂಗಾಳನಿಗೆ ಕೊಡುಗೆಯಾಗಿ ನೀಡಿದ್ದರು. ವಿಶೇಷ ದಿನಗಳಲ್ಲಿ ಶರತ್‌ಚಂದ್ರನು ಇದನ್ನು ದೇವರಮನೆಯಲ್ಲಿಟ್ಟು ಭಕ್ತಿಭಾವದಿಂದ ಪೂಜಿಸುತ್ತಿದ್ದನು.

ಕ್ರಿ.ಶ. ೧೯೩೮ರಿಂದ ೧೯೪೨ರ ವರೆಗೆ ತನ್ನ ಜೀವಿತದ ಕೊನೆಯ ದಿನಗಳನ್ನು ಬೆಹರಂಪುರ (ಮುರ್ಷಿದಾಬಾದ್)ದ ಮನೆ ಅಥವಾ ತನ್ನ ಹಳ್ಳಿಯ ಮನೆಯಲ್ಲಿ ಕಳೆದನು. ಶ್ರೀರಾಮಕೃಷ್ಣರ ಹಾಗೂ ಸ್ವಾಮಿ ವಿವೇಕಾನಂದರ ಕುರಿತು ಕೇಳಲು ಸದಾ ಸಾಧು ಬ್ರಹ್ಮಚಾರಿಗಳು, ಭಕ್ತರು ಅವರ ಮನೆಯಲ್ಲಿ ತುಂಬಿರುತ್ತಿದ್ದರು. ಶರತ್‌ಚಂದ್ರನಿಗೆ ಶ್ರೀರಾಮಕೃಷ್ಣ ಮಹಾಸಂಘದ ಸಾಧುಗಳೆಂದರೆ ಅಪಾರ ಗೌರವ. ಯಾರೇ ಸಾಧುಗಳು ಬಂದರೂ, ತನ್ನೆಲ್ಲಾ ಕೆಲಸ ಕಾರ್ಯಗಳನ್ನು ಬದಿಗಿಟ್ಟು ಇಡೀ ದಿನ ಅವರನ್ನು ಪ್ರೀತ್ಯಾದರಗಳಿಂದ ಸೇವಿಸುವುದರಲ್ಲೇ ನಿರತನಾಗಿರುತ್ತಿದ್ದನು.

ಕ್ರಿ.ಶ.೧೯೪೧ರಲ್ಲಿ ಎರಡನೇ ಮಹಾಯುದ್ಧದ ವೇಳೆಯಲ್ಲಿ ಮಗನ ಒತ್ತಾಯದ ಮೇರೆಗೆ ಬೆಹರಂಪುರದ ಮನೆಗೆ ಬರುವಾಗಲೇ ಸಂಪೂರ್ಣ ಅಂತರ್ಮುಖಿಯಾಗಿ ಬಿಟ್ಟಿದ್ದನು. ಸದಾ ಆ ಅಮೃತಶಿಲೆಯ ರಾಮಕೃಷ್ಣರ ಭಾವಚಿತ್ರದೊಡನೆ ಕಾಲ ಕಳೆಯುತ್ತಿದ್ದನು. ಆತನ ಪಾಲಿಗೆ ಇದರಲ್ಲಿ ಶ್ರೀರಾಮಕೃಷ್ಣರು ಜೀವಂತವಾಗಿದ್ದರು. ಭಾವಭಕ್ತಿಯಿಂದ ನಿತ್ಯವೂ ಪೂಜೆ, ನೈವೇದ್ಯಗಳನ್ನು ಮಾಡುತ್ತಿದ್ದನು. ಅಂತಹ ವೇಳೆಯಲ್ಲಿ ಭಕ್ತರಾಗಲಿ, ಮನೆಯವರಾಗಲಿ ಅವರಿಗೆ ತೊಂದರೆಯಾಗುವುದೆಂದು ಯಾರೂ ಹತ್ತಿರ ಸುಳಿಯುತ್ತಿರಲಿಲ್ಲ. ಆ ಸ್ಫೂರ್ತಿ ನೀಡುವ ದೃಶ್ಯವನ್ನು ದೂರದಿಂದಲೇ ನೋಡುತ್ತಾ ಸುಮ್ಮನೆ ಕಣ್ತುಂಬಿಸಿಕೊಳ್ಳುತ್ತಿದ್ದರು. ಶರತ್‌ನಿಗಾದರೋ ಸುತ್ತಲಿನ ಪರಿವೆಯೇ ಇರುತ್ತಿರಲಿಲ್ಲ. ಹೀಗೆ ದಿನಗಳು, ತಿಂಗಳುಗಳು ಉರುಳಿದವು. ಆರು ತಿಂಗಳ ಕಾಲ ಇಲ್ಲಿದ್ದು ಜನ್ಮಸ್ಥಳಕ್ಕೆ ಹೊರಟುಹೋದನು.

**ಅಂತಿಮ ದಿನಗಳು:** ಸ್ವಾಮಿ ವಿವೇಕಾನಂದರ ಶಿಷ್ಯನೆಂದು ಪ್ರಸಿದ್ಧನಾದ ಕಾರಣ ಈ ಹುಟ್ಟೂರಿನಲ್ಲಿ ವಿಶೇಷ ಉಪನ್ಯಾಸಗಳನ್ನು ನೀಡಲು ಅನೇಕ ಕರೆಗಳು ಬರುತ್ತಿದ್ದವು. ಶರತ್ ಯಾವ ಆಹ್ವಾನವನ್ನೂ ತಿರಸ್ಕರಿಸದೆ ಭಾವಪ್ರಚಾರ ಕಾರ್ಯದಲ್ಲಿ ಆನಂದದಿಂದ ಮಗ್ನನಾಗುತ್ತಿದ್ದನು.

ಕೊನೆಯ ದಿನಗಳಲ್ಲಿ ಅಸ್ತಮಾ ರೋಗಕ್ಕೆ ತುತ್ತಾದ ಕಾರಣ, ಅನೇಕಬಾರಿ ರಾತ್ರಿಯೆಲ್ಲಾ ನಿದ್ದೆಯಿಲ್ಲದೆ ಕಳೆಯಬೇಕಾಗುತ್ತಿತ್ತು. ಅಂತಹ ದಿನಗಳಲ್ಲಿ ಸಮಯ ವ್ಯರ್ಥಗೊಳಿಸದೆ ಮಂತ್ರಜಪದಲ್ಲಿ ರಾತ್ರಿಯೆಲ್ಲಾ ಕಳೆಯುತ್ತಿದ್ದನು. ಕುಳಿತು ತುಕ್ಕು ಹಿಡಿಯುವುದಕ್ಕಿಂತ ದುಡಿದು ಸವೆಯುವುದು ಮೇಲು ಎಂಬ ಸ್ವಾಮೀಜಿಯ ನುಡಿಗೆ ಮಾದರಿಯಾಗಿತ್ತು ಆತನ ಜೀವನ. ಸ್ವಾಮೀಜಿಯವರ ಕುರಿತು ಉಪನ್ಯಾಸ ಮಾಡಲು ಬಂದ ಕರೆಗಳನ್ನು ಮನ್ನಿಸಿ, ಅನಾರೋಗ್ಯವನ್ನು ಲೆಕ್ಕಿಸದೆ ಕಲ್ಲುಮುಳ್ಳಿನ ಹಾದಿಯಲ್ಲಿ ನಡೆಯುತ್ತಾ ಅಥವಾ ದೋಣಿಯಲ್ಲಿ ಹೋಗುತ್ತಿದ್ದನು ಅತ್ಯುತ್ಸಾಹದಿಂದ. ಈ ಸಮಯದಲ್ಲಿ ತನ್ನ ಗುರುವಿನಂತೆ ಉಡುಪು ಧರಿಸುತ್ತಿದ್ದನು.

ಶ್ರೀರಾಮಕೃಷ್ಣರನ್ನು ಕುರಿತು ಮಾತನಾಡುವಾಗ ಅದೆಷ್ಟು ಆವೇಶ ಭರಿತನಾಗಿ ಮಾತನಾಡುತ್ತಿದ್ದನೆಂದರೆ ಸ್ವಾಮಿ ವಿವೇಕಾನಂದರೇ ಅವನ ಮೈಮೇಲೆ ಬಂದಂತೆ ಅನಿಸುತ್ತಿತ್ತು. ಅಷ್ಟೇ ಅಲ್ಲ, ಪವಾಡ ವೆಂದರೆ ಆ ಘಳಿಗೆಗಳಲ್ಲಿ ಅಸ್ತಮಾ, ಉಸಿರಾಟದ ತೊಂದರೆ ಎಲ್ಲವೂ ಮಾಯವಾಗುತ್ತಿದ್ದವು!

ಇನ್ನೇನು ತನ್ನ ಕೊನೆಯ ದಿನಗಳು ಸಮೀಪಿಸುತ್ತಿವೆ ಎಂದರಿತ ಶರತ್‌ಚಂದ್ರನು ಸ್ವಾಮಿ ವಿರಜಾನಂದರ ಆಶೀರ್ವಾದ ಕೋರಿ ಒಂದು ಪತ್ರ ಬರೆದನು. ಅದಕ್ಕೆ ಉತ್ತರವಾಗಿ ಸ್ವಾಮಿಗಳು, ''ಶ್ರೀರಾಮಕೃಷ್ಣರಿಗೆ ಜಯವಾಗಲಿ! ಸ್ವಾಮಿ ವಿವೇಕಾನಂದರಿಗೆ ಜಯವಾಗಲಿ! ಪ್ರತಿಯೊಂದು ಉಸಿರಾಟದೊಡನೆಯೂ ಇದನ್ನು ಜಪಿಸು, ಭಯವೇಕೆ? ಆತಂಕವೇಕೆ? ನೀನೊಬ್ಬ ವೇದಾಂತಿ. ನಿನಗೆಲ್ಲಿ ರೋಗರುಜಿನಗಳ ಬಾಧೆ? ಈ ದೇಹದಿಂದ ನಿನಗೆ ಆಗಬೇಕಾದದ್ದಾರೂ ಏನು? ನೀನು ಸಚ್ಚಿದಾನಂದ, ನೀನೇ ಆ ಪರಬ್ರಹ್ಮ ಸ್ವರೂಪ, ಗುರುವಿಗೆ ಜಯವಾಗಲಿ!'' ಎಂದು ಬರೆದರು.

ಮುಂದಿನ ದಿನಗಳಲ್ಲಿ ಅಸ್ತಮಾ ಖಾಯಿಲೆ ಉಲ್ಬಣವಾಗಿ ನ್ಯುಮೋನಿಯಾಗೆ ತಿರುಗಿತು. ಒಂದು ರಾತ್ರಿ ತನ್ನ ಹಾಸಿಗೆಯ ಬಳಿಯೇ ಕುಳಿತಿದ್ದ ಮಗ ಹಾಗೂ ಅಳಿಯನನ್ನು ಕುರಿತು, ''ಧೂಪ ತನ್ನಿ ಬೇಗ, ಸ್ವಾಮೀಜಿ ಬಂದಿದ್ದಾರೆ'' ಎಂದು ಅರುಹಿ ದೊಡನೆ, ಇನ್ನು ಅಂತ್ಯಕಾಲ ಸಮೀಪಿಸಲು ತಡವಿಲ್ಲವೆಂದು ಮನೆಯವರಿಗೆಲ್ಲಾ ಮನದಟ್ಟಾಗಿಬಿಟ್ಟಿತು. ತಕ್ಷಣವೇ ಧೂಪ ಹಚ್ಚಿದರು. ಆದರೆ ಶರತ್‌ಚಂದ್ರನು ಅಸಹನೆಯಿಂದ, ''ಶ್ರೀರಾಮ ಕೃಷ್ಣರು ಬಂದಿದ್ದಾರೆ. ಅವರು ನಿಂತೇ ಇದ್ದಾರೆ, ಆಸನವನ್ನು ನೀಡಿ. ಏನು ಮಾಡುತ್ತಿದ್ದೀರಿ ನೀವೆಲ್ಲಾ?'' ಎಂದಾಗ ಯಾರ ದರ್ಶನವೂ ಆಗದ ಮನೆಯವರೆಲ್ಲಾ ತಬ್ಬಿಬ್ಬಾದರು. ''ಎಲ್ಲಿ? ಎಲ್ಲಿ?'' ಎಂಬ ಮನೆಯವರ ಪ್ರಶ್ನೆಗೆ ದುಃಖ ಹಾಗೂ ಜುಗುಪ್ಸೆ ಯಿಂದ ನೋಡಿ, ''ಅಲ್ಲೇ ಮುಂದೆ, ಅವರು ನಿಂತೇ ಇದ್ದಾರೆ, ಕಾಣುತ್ತಿಲ್ಲವೇ ನಿಮಗೆ? ಆಹಾ! ನೀವು ಆಸನ ಕೊಡಲಿಲ್ಲ, ಅವರು ಹೊರಟೇ ಹೋದರು'' ಎಂದು ಪೇಚಾಡಿದನು. ಇದಾದ ನಂತರ ಸ್ವಾಮಿ ಬ್ರಹ್ಮಾನಂದರು, ಸ್ವಾಮಿ ಯೋಗಾನಂದರು, ಸ್ವಾಮಿ ಪ್ರೇಮಾನಂದರು, ಸ್ವಾಮಿ ಶಾರದಾನಂದರು ಹೀಗೆ ಇನ್ನಿತರ ನೇರ ಶಿಷ್ಯರು ಒಬ್ಬೊಬ್ಬರಾಗಿ ದರ್ಶನ ನೀಡಿದ ಪರಿ ಣಾಮವಾಗಿ ಶರತ್‌ಚಂದ್ರನು ಪದೇ ಪದೇ ತಲೆಬಾಗಿ ವಂದಿಸು ತ್ತಿದ್ದುದನ್ನು ಉಳಿದವರೆಲ್ಲ ಕಂಡರು.

ಅಂದು ಶನಿವಾರ, ೨೩ನೇ ಆಗಸ್ಟ್, ೧೯೪೨. ಹಿರಿಯ ಮಗ ಜಯಚಂದ್ರನು ಕೆಲಸಕ್ಕೆಂದು ಊರಿಗೆ ಹೊರಟಿದ್ದನು. ಸ್ನಾನ, ತಿಂಡಿಗಳನ್ನು ಮುಗಿಸಿ ತಂದೆಗೆ ವಿದಾಯ ಹೇಳಲು ಕೊಠಡಿ ಯೊಳಗೆ ಕಾಲಿಟ್ಟ ಮಗನು ಸ್ತಂಭೀಭೂತನಾದನು! ಉಸಿರಾಟದ ತೊಂದರೆಯಿಂದಾಗಿ ಒಂದು ತಿಂಗಳಿಂದ ಎದೆಗೆ ದಿಂಬನ್ನು ಒತ್ತಿ ಹಿಡಿದು ಮಲಗಲು ಹೆಣಗಾಡುತ್ತಿದ್ದ ತಂದೆ ಈ ದಿನ ರೋಗದ ಚಿಹ್ನೆಯೇ ಇಲ್ಲದೆ ಪ್ರಶಾಂತವಾಗಿ ಮಲಗಿದ್ದಾರೆ. ಕಾಂತಿಯಿಂದ ಬೆಳಗುತ್ತಿದ್ದ ಆ ಮುಖದಲ್ಲಿ ಶಾಂತಿ ತಾಂಡವವಾಡುತ್ತಿತ್ತು. ಕುಶಲ ಮತಿ ಜಯಚಂದ್ರನಿಗೆ ತನ್ನ ತಂದೆ ಜೀವಿಸಿರಲಾರರೆಂದು ತಿಳಿ ಯಿತು, ಕೂಡಲೇ ಊರಿಗೆ ಹೋಗುವುದನ್ನು ರದ್ದುಗೊಳಿಸಿದನು.

ಆರುವ ಮುನ್ನ ಜ್ಯೋತಿ ಜೋರಾಗಿ ಬೆಳಗುವುದು. ಆ ದಿನ ವೆಲ್ಲಾ ಶರತ್‌ಚಂದ್ರನು ತನ್ನ ಇಷ್ಟದೇವತೆಯೊಡನೆ ಒಂದಾಗಿ ಭಾವದಲ್ಲಿದ್ದಂತೆ ಕಾಣುತ್ತಿತ್ತು. ಇಹಲೋಕದ ಪರಿವೆಯೇ ಇರ ಲಿಲ್ಲ. ಸಂಜೆಯ ಹೊತ್ತಿಗೆ ಎಲ್ಲರ ಮುಖದಲ್ಲೂ ಶ್ರೀರಾಮಕೃಷ್ಣ ರನ್ನೇ ದರ್ಶಿಸುತ್ತಾ, ಪೂರ್ಣಪ್ರಜ್ಞೆಯಿಂದ ದೇಹವನ್ನು ಒಗೆದು ಇಷ್ಟದೇವರ ಪಾದಾರವಿಂದ ಸೇರಿದನು. ಭಗವಂತ ತನ್ನ ಭಕ್ತರನ್ನು ಕೈಹಿಡಿದು ತನ್ನ ಲೋಕಕ್ಕೆ ಕರೆದೊಯ್ಯುವನು.

ಶರತ್‌ಚಂದ್ರನು ಕಣ್ಮರೆಯಾಗಲಿಲ್ಲ. ಜಗದ್ಗುರುಗಳ ಕೈದೀವಿಗೆ ಯಾದ ಇವರುಗಳು ಸಾಮಾನ್ಯ ಜೀವಿಗಳಂತೆ ಜೀವಿಸರು, ಕಣ್ಮರೆಯಾಗುವರು. ಸ್ವಾಮಿ ವಿವೇಕಾನಂದರೊಡನೆ ಸಂವಾದ ದಲ್ಲಿ ಚಿರಕಾಲವೂ ಜೀವಿಸುತ್ತಿದ್ದಾರೆ. ಅಂತಹ ಶ್ರೀಮಂತ ಆಧ್ಯಾ ತ್ಮಿಕ ಕೊಡುಗೆಯನ್ನು ಬಿಟ್ಟುಹೋದ ಈ ಮಹಾನುಭಾವರಿಗೆ ಮುಂದಿನ ಪೀಳಿಗೆ ಸದಾ ಕೃತಜ್ಞವಾಗಿರುತ್ತದೆ. *(ಮುಕ್ತಾಯ)*

## ತ್ರಿಗುಣಾತೀತಾನಂದರ ತಾಂತ್ರಿಕ ಸಾಧನೆ

ಬಾರಾನಗರ ಮಠದಲ್ಲಿದ್ದುಕೊಂಡು ಸಾಧನೆ ಮಾಡುತ್ತಿದ್ದ ಸಮಯದಲ್ಲಿ ಸ್ವಾಮಿ ತ್ರಿಗುಣಾತೀತಾನಂದರಿಗೆ ರಾತ್ರಿಹೊತ್ತು ಸ್ಮಶಾನ ದಲ್ಲಿ ತಾಂತ್ರಿಕ ಪದ್ಧತಿ ಪ್ರಕಾರ ಸಾಧನೆ ಮಾಡಬೇಕೆಂಬ ಆಸೆ ಭುಗಿಲೆದ್ದಿತು. ಆದರೆ ಸ್ವಾಮಿ ವಿವೇಕಾನಂದರು ಅದಕ್ಕೆ ಅನುಮತಿ ನೀಡ ಲಾರರು ಎಂದು ಅವರಿಗೆ ಗೊತ್ತಿತ್ತು. ಒಂದು ದಿನ ರಾತ್ರಿ, ಉಳಿದವರೆಲ್ಲ ಮಲಗಿ ನಿದ್ರಿಸಿದ ಮೇಲೆ, ಇವರು ಸದ್ದಿಲ್ಲದೆ ಸ್ಮಶಾನದ ಕಡೆಗೆ ಹೊರಟಿದ್ದರು. ಅಷ್ಟರಲ್ಲಿ ಸ್ವಾಮೀಜಿ ಅವರನ್ನು ಕರೆದು, ''ನೀನೆಲ್ಲಿಗೆ ಹೋಗುತ್ತಿದ್ದೀಯಾ?'' ಎಂದರು. ತ್ರಿಗುಣಾತೀತಾನಂದರು ಏನೂ ಮಾತನಾಡದೆ ನಿಂತಿದ್ದರು. ಸ್ವಾಮೀಜಿ ಹೇಳಿದರು: ''ಶ್ರೀರಾಮಕೃಷ್ಣರು ನನಗೆ ಕನಸಿನಲ್ಲಿ ಕಾಣಿಸಿಕೊಂಡು, ನೀನೆಲ್ಲಿಗೆ ಹೋಗು ತ್ತಿದ್ದೀಯಾ ಎಂದು ಹೇಳಿದರು. ನೀನು ಅಲ್ಲಿಗೆ ಹೋಗಬಾರದೆಂದೂ, ಅವರು ನಮಗಾಗಿ ಇಷ್ಟೆಲ್ಲ ಮಾಡಿ ಹೋಗಿದ್ದಾರೆಂದೂ, ನಮ್ಮ ಮನಸ್ಸನ್ನು ಅವರ ಮೇಲೆಯೇ ಯಾವಾಗಲೂ ಇರಿಸಿಕೊಂಡರೆ ಸಾಕೆಂದೂ ಅವರು ಹೇಳಿದರು.'' ತ್ರಿಗುಣಾತೀತಾನಂದರು ತಾಂತ್ರಿಕ ಸಾಧನೆ ಮಾಡುವ ಪ್ರಯತ್ನವನ್ನು ಇನ್ನೆಂದಿಗೂ ಮಾಡಲಿಲ್ಲ. *('Sri Ramakrishna Saves' ಗ್ರಂಥದಿಂದ)*